**<u>ಸೆಕ್ಷನ್ 4(1) (ಬಿ) (xii) ಪ್ರಕಾರ ಸಹಾಯಧನ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಅವುಗಳಿಗಾಗಿ ನಿಗದಿಗೊಳಿಸಿದ ಅನುದಾನ ಮತ್ತು ಫಲಾನುಭವಿಗಳ ವಿವರ:</u>–**

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯು, ಗ್ರಾಮೀಣ ಪ್ರದೇಶದ ಬಡತನ ನಿರ್ಮೂಲನ ಮತ್ತು ಉದ್ಯೋಗ ಸೃಷ್ಟಿ ಕಾರ್ಯಕ್ರಮವಾಗಿರುತ್ತದೆ. ಎರಡನೇ ಗ್ರೇಡಿಂಗ್ ಆದ ಸ್ವಸಹಾಯ ಸಂಘಗಳು, ಮುಖ್ಯ ಆರ್ಥಿಕ ಚಟುವಟಿಕೆಯನ್ನು ಕೈಗೊಳ್ಳಲು ಸರ್ಕಾರದಿಂದ ಗರಿಷ್ಟ ರೂ.1.25 ಲಕ್ಷ ಸಹಾಯಧನ ಪಡೆಯಲು ಅರ್ಹವಿರುತ್ತವೆ. ವೈಯಕ್ತಿಕ ಸ್ವರೋಜ್‌ಗಾರಿಗಳು ಗರಿಷ್ಟ ರೂ.10,000/–ಗಳ ಸಹಾಯಧನ ಪಡೆಯಲು ಅರ್ಹವಿರುತ್ತವೆ. ಸಾಲದ ಮೊತ್ತ ಮುಖ್ಯ ಆರ್ಥಿಕ ಚಟುವಟಿಕೆಗಳ ಅನ್ವಯ ಸ್ವಸಹಾಯ ಸಂಘಗಳಿಗೆ ರೂ.5.00 ಲಕ್ಷ, ವೈಯಕ್ತಿಕ ಸ್ವರೋಜ್‌ಗಾರಿಗಳಿಗೆ ರೂ.30,000/–ಗಳು ಆಗಿರುತ್ತದೆ. ಬಡತನ ರೇಖೆಗಿಂತ ಕೆಳಗಿರುವ ಗ್ರಾಮೀಣ ಸ್ವರೋಜ್‌ಗಾರಿಗಳಲ್ಲಿ ಈ ಕಾರ್ಯಯೋಜನೆಯಂತೆ, ಯಾರು ಮುಂದೆ ಬರುತ್ತಾರೆಯೋ ಅಂತಹವರನ್ನು ಗುರುತಿಸಿ, ಸ್ವಸಹಾಯ ಸಂಘಗಳ ರಚನೆ ಮೂಲಕ ಲಭ್ಯವಿರುವ ಸವಲತ್ತುಗಳನ್ನು ಪಡೆದುಕೊಂಡು ಬಡತನ ರೇಖೆಗಿಂತ ಮೇಲೆ ಬರುವಂತೆ ಮಾಡುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.